# ಆಶೂರಾ

## ಆಶೂರಾ ಎಂದರೇನು?

ಉಲಮಾಗಳ ಪ್ರಬಲವಾದ ಮತ್ತು ಪ್ರಸಿದ್ಧವಾದ ಅಭಿಪ್ರಾಯ ಪ್ರಕಾರ ಆಶೂರಾ ಎಂದರೆ ಮುಹರ್ರಮ್ ತಿಂಗಳ ಹತ್ತನೇ ದಿನವಾಗಿದೆ.

## ಆಶೂರಾ ಶ್ರೇಷ್ಠತೆಯೇನು?

ಅಬೂ ಕತಾದಃ(ರ)ರಿಂದ ವರದಿ: ಆಶೂರಾ ದಿನದ ಉಪವಾಸದ ಬಗ್ಗೆ ಪ್ರವಾದಿ(ﷺ)ರವರೊಂದಿಗೆ ಪ್ರಶ್ನಿಸಲಾದಾಗ ಅವರು ಹೇಳಿದರು: 'ಅದು ಗತ ವರ್ಷದ ಪಾಪಗಳನ್ನು ಅಳಿಸಿ ಹಾಕುತ್ತದೆ.' ಇನ್ನೊಂದು ವರದಿಯಲ್ಲಿ: 'ಆಶೂರಾ ದಿನದ ಉಪವಾಸ; ಕಳೆದ ವರ್ಷದ ಪಾಪಗಳನ್ನು ಅಲ್ಲಾಹು ಅಳಿಸಿ ಹಾಕುವನೆಂದು ನಾನು ಭಾವಿಸುತ್ತೇನೆ.' [ಮುಸ್ಲಿಮ್ 1162]

## ಉಪವಾಸ ಯಾಕೆ?

ಮೂಸಾ(ಅ)ರನ್ನು ಮತ್ತು ಬನೂ ಇಸ್ರಾಈಲರನ್ನು ರಕ್ಷಿಸಿದ್ದಕ್ಕಾಗಿ ಮತ್ತು ಫಿರ್‌ಔನ್ ಮತ್ತು ಅವನ ಜನರನ್ನು ಮುಳುಗಿಸಿ ನಾಶ ಮಾಡಿದ್ದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಲು ಮತ್ತು ಆ ದಿನವನ್ನು ಗೌರವಿಸಲು ಅಂದು ಉಪವಾಸ ಆಚರಿಸಲಾಗುತ್ತದೆ.

## ಒಂಬತ್ತನೇ ದಿನ ಉಪವಾಸ ಆಚರಿಸಬೇಕೇ?

ಇಬ್ನ್ ಅಬ್ಬಾಸ್(ರ)ರಿಂದ ವರದಿ: ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಆಶೂರಾ ದಿನದಂದು ಉಪವಾಸ ಆಚರಿಸಿದಾಗ ಮತ್ತು ಉಪವಾಸ ಆಚರಿಸುವಂತೆ ಆಜ್ಞಾಪಿಸಿದಾಗ ಸಹಾಬಾಗಳು ಹೇಳಿದರು: 'ಓ ಅಲ್ಲಾಹನ ರಸೂಲರೇ, ಅದು ಯಹೂದರು ಮತ್ತು ಕ್ರೈಸ್ತರು ಗೌರವಿಸುವ ದಿನವಾಗಿದೆ.' ಆಗ ಅಲ್ಲಾಹನ ರಸೂಲ್ (ﷺ) ರವರು ಹೇಳಿದರು: 'ಮುಂದಿನ ವರ್ಷ ಬಂದರೆ –ಇನ್‌ಶಾ ಅಲ್ಲಾಹ್– ನಾವು ಒಂಬತ್ತನೇ ದಿನದಲ್ಲೂ ಉಪವಾಸ ಆಚರಿಸುವೆವು.' ಆದರೆ ಮುಂದಿನ ವರ್ಷ ಬರುವುದಕ್ಕೆ ಮೊದಲೇ ಅಲ್ಲಾಹನ ರಸೂಲ್(ﷺ) ರವರು ನಿಧನರಾದರು. [ಮುಸ್ಲಿಮ್] ಇನ್ನೊಂದು ವರದಿಯಲ್ಲಿ: 'ನಾನು ಮುಂದಿನ ವರ್ಷದ ತನಕ ಬಾಕಿಯಾದರೆ ಒಂಬತ್ತನೇ ದಿನದಲ್ಲೂ ಉಪವಾಸ ಆಚರಿಸುವೆನು.'

islamhouse .com

IslamHouse.com

1436 – 2014